# ಮಕ್ಕಳ ಸೃಜನಾತ್ಮಕ ಅಭಿವ್ಯಕ್ತಿಗೆ ತರಗತಿಯಲ್ಲಿ ಅವಕಾಶ ನೀಡುವುದು–ಒಂದು ಪ್ರಾಯೋಗಿಕ ಅಧ್ಯಯನ

*– ಜಿ. ವಿ. ನಾಗಾನಂದ*

## ಲೇಖನದ ಸಾರಾಂಶ

*ಮಗುವಿನ ಜೀವನದಲ್ಲಿ ಭಾಷೆಯ ಬೆಳವಣಿಗೆಯನ್ನು ಪುಷ್ಟೀಕರಿಸುವಲ್ಲಿ ಮತ್ತು ಮುಂದಿನ ಕಲಿಕೆಗೆ ಅಡಿಪಾಯವನ್ನು ಹಾಕಿಕೊಡುವಲ್ಲಿ ಸ್ವತಂತ್ರವಾದ ಮತ್ತು ಸೃಜನಶೀಲವಾದ ಅಭಿವ್ಯಕ್ತಿಯು (ಬರವಣಿಗೆ, ಚಿತ್ರ ಬಿಡಿಸುವುದು, ಕವನ ರಚಿಸುವುದು ಇತ್ಯಾದಿ) ಮುಖ್ಯವಾದುದು. ತರಗತಿಗಳಲ್ಲಿ ಇಂತಹ ಅಭಿವ್ಯಕ್ತಿಗೆ ಅವಕಾಶಗಳನ್ನು ಒದಗಿಸಿಕೊಡುವುದು ನಿರ್ಣಾಯಕವಾದುದು.*

*ಈ ಲೇಖನವು ಎರಡು ಭಾಗಗಳನ್ನು ಹೊಂದಿದೆ. ಮೊದಲ ಭಾಗದಲ್ಲಿ ಸ್ವತಂತ್ರ ಮತ್ತು ಸೃಜನಶೀಲವಾದ ಅಭಿವ್ಯಕ್ತಿಯ ಬಗೆಗೆ ಶಿಕ್ಷಕರ ಗ್ರಹಿಕೆಗಳನ್ನು ಪರಿಶೀಲಿಸಲಾಗಿದೆ. ಐದು ಮತ್ತು ಆರನೇ ತರಗತಿಗಳಲ್ಲಿ ಭಾಷೆಯನ್ನು ಕಲಿಸುತ್ತಿರುವ ಶಿಕ್ಷಕರೊಂದಿಗಿನ ಮಾತುಕತೆಯಿಂದ ಇದನ್ನು ಸಾಧಿಸಲಾಗಿದೆ. ಈ ಮಾತುಕತೆಯಿಂದ, ಶಿಕ್ಷಕರಿಗೆ ಸ್ವತಂತ್ರ ಮತ್ತು ಸೃಜನಶೀಲವಾದ ಅಭಿವ್ಯಕ್ತಿಯು ಮಹತ್ವಪೂರ್ಣವಾದದ್ದು ಎನ್ನುವ ಭಾವನೆಯಿದ್ದರೂ, ಅದು ಹೆಚ್ಚು ಸಮಯವನ್ನು ಬೇಡುವುದರಿಂದ ಅದನ್ನು ಮಾಡಿಸಲಾಗುತ್ತಿಲ್ಲ; ಕೆಲವು ವಿದ್ಯಾರ್ಥಿಗಳು ಮಾತ್ರ ಸೃಜನಶೀಲವಾಗಿ ಅಭಿವ್ಯಕ್ತಿಸಬಲ್ಲರು; ಹಾಗೆಯೇ ಸೃಜನಶೀಲವಾದ ಬರವಣಿಗೆ ಎನ್ನುವುದು ವಿಶಿಷ್ಟವಾದದ್ದು ಎನ್ನುವ ಅಭಿಪ್ರಾಯಗಳು ಶಿಕ್ಷಕರಲ್ಲಿ ಇರುವುದು ಕಂಡುಬರುತ್ತದೆ. ಈ ಲೇಖನದ ಎರಡನೆಯ ಭಾಗವು ಕರ್ನಾಟಕದ ಮಂಡ್ಯ ಉತ್ತರ ಬ್ಲಾಕ್‌ನ ಮೂರು ಸರ್ಕಾರಿ ಶಾಲೆಗಳ ಆರನೇ ತರಗತಿಯ ವಿದ್ಯಾರ್ಥಿಗಳೊಂದಿಗೆ ನಡೆಸಿದ ಮೂರು ಚಟುವಟಿಕೆಗಳ ಅಧ್ಯಯನಗಳನ್ನು ಒಳಗೊಂಡಿದೆ. ಈ ಚಟುವಟಿಕೆಗಳೆಂದರೆ: (ಅ) ಖಾಲಿ ಹಾಳೆಯಲ್ಲಿ ಮುಕ್ತ ಬರವಣಿಗೆ (ಆ) ಚಿತ್ರ ನೋಡಿ ಬರೆಯುವುದು ಮತ್ತು (ಇ) ವಾಕ್ಯವೃಂದವನ್ನು ಓದಿ ಚಿತ್ರಮುಖೇನ ಅಭಿವ್ಯಕ್ತಿಸುವುದು. ಮಕ್ಕಳ ಸ್ವತಂತ್ರ ಮತ್ತು ಸೃಜನಶೀಲ ಅಭಿವ್ಯಕ್ತಿ ಮೌಲ್ಯಮಾಪನ ಕೈಪಿಡಿ (scoring guides) ಬಳಸಿ ವಿಶ್ಲೇಷಣೆಗೆ ಒಳಪಡಿಸಲಾಯಿತು ಮತ್ತು ಅವರ ಕಾರ್ಯನಿರ್ವಹಣೆಯನ್ನು ಆಧರಿಸಿ ಪರ್ಯಾಲೋಚನೆ (reflections) ಯೊಂದಿಗೆ ಅವಲೋಕಿಸಲಾಯಿತು.*

*ಈ ಅಧ್ಯಯನವು ಸ್ವತಂತ್ರವಾಗಿ ಮತ್ತು ಸೃಜನಶೀಲವಾಗಿ ಅಭಿವ್ಯಕ್ತಿಯಲ್ಲಿ ತೊಡಗಿಕೊಳ್ಳಲು ಮಕ್ಕಳಿಗಿರುವ ಭಯ ಮತ್ತು ಸಮಸ್ಯೆಗಳು ಹಾಗೂ ಶಿಕ್ಷಕರ ಕಲಿಕೆಗಿರುವ ಸೂಚನೆಗಳನ್ನು ಚರ್ಚಿಸುವುದರೊಂದಿಗೆ ಪರಿಸಮಾಪ್ತಿ ಹೊಂದುತ್ತದೆ.*

## ಪೀಠಿಕೆ

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005, ಮಕ್ಕಳು ಸ್ವತಂತ್ರವಾಗಿ ಮತ್ತು ಸೃಜನಶೀಲವಾಗಿ ಯೋಚಿಸುವಂತೆ ಮಾಡುವುದು ಅತ್ಯಂತ ಪ್ರಮುಖವಾದ ಶೈಕ್ಷಣಿಕ ಗುರಿಗಳಲ್ಲಿ ಒಂದು ಎಂದು ಹೇಳುತ್ತದೆ. ಮಕ್ಕಳು ವಿಭಿನ್ನವಾಗಿ ಯೋಚಿಸುವ ಸಾಮರ್ಥ್ಯದೊಂದಿಗೆ ಶಾಲೆಗೆ ಬಂದಿರುತ್ತಾರೆ. ಆದರೆ ಪ್ರಸ್ತುತ ಶಾಲಾ ಶಿಕ್ಷಣದ ಸನ್ನಿವೇಶದಲ್ಲಿ ಹೀಗೆ ವಿಭಿನ್ನವಾಗಿ ಯೋಚಿಸುವುದಕ್ಕೆ ಹೆಚ್ಚಿನ ಅವಕಾಶ ಸಿಗದ ಕಾರಣಕ್ಕಾಗಿ ಎಲ್ಲರೂ ಹೆಚ್ಚು ಕಡಿಮೆ ಒಂದೇ ರೀತಿಯ ಆಲೋಚನಾ ವಿನ್ಯಾಸವನ್ನು ಹೊಂದುತ್ತಿದ್ದಾರೆ. ಯಾವ ತರಗತಿಯಲ್ಲಿ ಸ್ವಾಭಿವ್ಯಕ್ತಿಗೆ ಹೆಚ್ಚಿನ ಅವಕಾಶ ದೊರೆಯುತ್ತದೆಯೋ ಅಲ್ಲಿ ಸಹಜವಾಗಿ ಸೃಜನಾತ್ಮಕತೆಗೆ ಅವಕಾಶ ದೊರೆತಂತಾಗುತ್ತದೆ. ಆದರೂ ನಾವು ಏನನ್ನಾದರೂ ಬರೆಯಲು ಮಕ್ಕಳಿಗೆ ಹೇಳಿದಾಗ ಅವರು ಕೇಳುವ ಪ್ರಶ್ನೆ: "ಸರ್, ನೀವೇಕೆ ಸ್ವಂತ ವಾಕ್ಯವನ್ನು ನಮ್ಮಿಂದ ಬರೆಸುತ್ತೀರಿ? ಸ್ವಂತ ವಾಕ್ಯ ಅಂದರೆ ನಂಗೆ ಗೊತ್ತಿರೋದನ್ನು ಬರೆಯೋದು ಅಲ್ಲವೆ?" ಇಂತಹ ಪ್ರಶ್ನೆಗಳು ಶಿಕ್ಷಕರಿಗೆ ಆಶ್ಚರ್ಯವನ್ನೇನೂ ಉಂಟುಮಾಡುವುದಿಲ್ಲ. ಏಕೆಂದರೆ ಶಿಕ್ಷಕರಾಗಿ ಪ್ರಶ್ನೆಗಳಿಗೆ ನಾವೇ ಸಿದ್ಧ ಉತ್ತರಗಳನ್ನು ಬರೆಸಿ "ಪರೀಕ್ಷೆಯಲ್ಲಿ ನೀನು ಇದನ್ನೇ ಬರೆಯಬೇಕು" ಎಂದು ಸೂಚಿಸಿರುತ್ತೇವೆ. ಹೀಗೆ 'ನಾನು ಹೇಳುವುದನ್ನು ನೀನು ಬರೆಯಬೇಕು' ಎನ್ನುವುದರ ಮೂಲಕ ನಾವು ಮಗುವಿನ ಸ್ವತಂತ್ರ ಆಲೋಚನೆಯನ್ನು, ಸಹಜವಾದ ಅಭಿವ್ಯಕ್ತಿಯನ್ನು ಹೊಸೆದು ಹಾಕುತ್ತಿದ್ದೇವೆ. ಇಂತಹ ಸನ್ನಿವೇಶದಲ್ಲಿ ಮಕ್ಕಳಿಗೆ ಸ್ವತಂತ್ರ ಮತ್ತು ಸೃಜನಶೀಲ ಅಭಿವ್ಯಕ್ತಿಗೆ ಅಗತ್ಯವಾದ ಪ್ರೇರಣಾತ್ಮಕ ವಾತಾವರಣವನ್ನು ಒದಗಿಸಿಕೊಡಬೇಕಿದೆ. ಈ ನಿಟ್ಟಿನಲ್ಲಿ ಸೃಜನಾತ್ಮಕ ಅಭಿವ್ಯಕ್ತಿಗೆ ತರಗತಿಗಳಲ್ಲಿನ ಅವಕಾಶಗಳ ಕುರಿತಾಗಿ ಈ ಪ್ರಬಂಧವು ವಿಶ್ಲೇಷಿಸುತ್ತದೆ. ಇದಕ್ಕಾಗಿ ಸೃಜನಾತ್ಮಕ ಅಭಿವ್ಯಕ್ತಿಗೆ ಅವಕಾಶ ನೀಡಲು ತರಗತಿಗಳಲ್ಲಿ ನಡೆಸಲಾಗಿರುವ ಮೂರು ಚಟುವಟಿಕೆಗಳು ಮತ್ತು ಶಿಕ್ಷಕರೊಡನೆ ನಡೆಸಿದ ಸಂವಾದವನ್ನೊಳಗೊಂಡ ಅಧ್ಯಯನವನ್ನು ಈ ಲೇಖನವು ಪರಿಶೀಲಿಸುತ್ತದೆ.

ಪ್ರಬಂಧದ ಮೊದಲ ಭಾಗದಲ್ಲಿ ತರಗತಿಯಲ್ಲಿ ಸ್ವತಂತ್ರ ಅಭಿವ್ಯಕ್ತಿಗೆ ಇರುವ ಅವಕಾಶಗಳ ಬಗ್ಗೆ ಶಿಕ್ಷಕರೊಂದಿಗೆ ನಡೆಸಿದ ಸಂವಾದಗಳ ಮೂಲಕ ಅವರ ಗ್ರಹಿಕೆಯನ್ನು ಪರಿಶೀಲಿಸಲಾಗಿದ್ದು, ಎರಡನೆಯ ಭಾಗದಲ್ಲಿ ಮೂರು ಶಾಲೆಗಳ ಆರನೇ ತರಗತಿಯ ವಿದ್ಯಾರ್ಥಿಗಳ ಸೃಜನಾತ್ಮಕ ಅಭಿವ್ಯಕ್ತಿಯನ್ನು ಪುಷ್ಟೀಕರಿಸಲು ಕೈಗೊಂಡ ಮೂರು ಚಟುವಟಿಕೆಗಳನ್ನು ವಿವರಿಸುತ್ತದೆ. ಗ್ರಾಮೀಣ ಭಾಗದಲ್ಲಿರುವ ಮಂಡ್ಯ ಉತ್ತರ ಬ್ಲಾಕ್‌ನ ಈ ಮೂರು ಶಾಲೆಗಳನ್ನು, ಆ ಶಾಲೆಗಳ ಶಿಕ್ಷಕರು ಮತ್ತು ವಿದ್ಯಾರ್ಥಿಗಳೊಂದಿಗೆ ಬೆಳೆಸಿಕೊಂಡ ನಂಟಿನ ಕಾರಣದಿಂದ ಆಯ್ಕೆ ಮಾಡಿಕೊಳ್ಳಲಾಯಿತು. ಪ್ರತಿಯೊಂದು ಚಟುವಟಿಕೆಯ ತರುವಾಯದಲ್ಲಿ ಗಮನಿಸಿದ ಮತ್ತು ಪರ್ಯಾಲೋಚಿಸಿದ ಅಂಶಗಳನ್ನು ಕೆಳಗೆ ಚರ್ಚಿಸಲಾಗಿದೆ.

# ಭಾಗ – 1

## ಸ್ವತಂತ್ರ ಮತ್ತು ಸೃಜನಾತ್ಮಕ ಅಭಿವ್ಯಕ್ತಿಯ ಕುರಿತಾಗಿ ಶಿಕ್ಷಕರ ದೃಷ್ಟಿಕೋನಗಳು

ಭಾಷಾ ತರಗತಿಯ ಸನ್ನಿವೇಶದಲ್ಲಿ ಮಕ್ಕಳ ಸೃಜನಾತ್ಮಕ ಅಭಿವ್ಯಕ್ತಿಯ ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಇರುವ ಅವಕಾಶಗಳ ವಿಚಾರವಾಗಿ ಆಯ್ದ ಶಿಕ್ಷಕರ (ಅವರ ಲಭ್ಯತೆಯ ಆಧಾರದ ಮೇಲೆ) ಸಂವಾದಗಳನ್ನು ನಡೆಸಲಾಯಿತು. ಈ ಸಂವಾದಗಳು ಕೆಳಗಿನ ಪ್ರಶ್ನೆಗಳ ಸುತ್ತ ಜರುಗಿದವು. ಇವುಗಳನ್ನು ಆಧರಿಸಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವಂತೆ ಶಿಕ್ಷಕರನ್ನು ಕೇಳಲಾಯಿತು.

✳ ವಿದ್ಯಾರ್ಥಿಗಳು ತಮಗನ್ನಿಸುವ ವಿಚಾರಗಳನ್ನು ತಮ್ಮದೇ ಭಾಷೆಯಲ್ಲಿ (ಅದು ಚಿತ್ರದ ಮೂಲಕ ಆಗಬಹುದು ಇಲ್ಲವೇ ಬರಹದ ರೂಪದಲ್ಲಿರಬಹುದು) ಅಭಿವ್ಯಕ್ತಿಸಲು ಸಮರ್ಥರೇ?

✳ ನಿಮಗನ್ನಿಸಿದ ವಿಚಾರಗಳ ಕುರಿತು ಬರೆಯಿರಿ ಎಂದು ಮಕ್ಕಳನ್ನು ಕೇಳಿದಾಗ ಅವರು ಯಾವ ಸ್ವರೂಪದ ಸವಾಲುಗಳು ಮತ್ತು ತಳಮಳಗಳನ್ನು ಎದುರಿಸುತ್ತಾರೆ?

✳ ಸ್ವತಂತ್ರವಾದ ಅಭಿವ್ಯಕಿಯ ಸಂದರ್ಭದಲ್ಲಿ ಮಕ್ಕಳು ಬರೆದ ವಿಚಾರಗಳು ತರಗತಿಯ ಅನುಭವಗಳಾಗಿದ್ದವೇ? ಅಥವಾ ಅದರ ಹೊರಗಿನದ್ದೇ?

✳ ಅವರು ಸ್ವತಂತ್ರವಾಗಿ ಬರೆಯುವಾಗ ಭಾಷೆಯಲ್ಲಿನ ಪ್ರಬಲವಾದ ಪ್ರಭಾವವು ಮನೆ ಭಾಷೆಯದ್ದೇ ಅಥವಾ ಶಾಲೆಯ ಭಾಷೆಯದ್ದೇ? ಅವರ ಬರವಣಿಗೆ ಹೇಗೆ ಸಂರಚನೆಯಾಗಿದೆ?

✳ ಅವರು ಬಾಯಲ್ಲಿ ಹೇಳಿದ್ದನ್ನು ಹಾಗೆಯೇ ಬರೆಯಲು ಸಮರ್ಥರೇ?

## ಅವಲೋಕನಗಳು

**ಸೃಜನಾತ್ಮಕ ಬರವಣಿಗೆಯ ಕುರಿತಾದ ಗ್ರಹಿಕೆಗಳು:** ಸೃಜನಾತ್ಮಕತೆಗೆ ಸಂಬಂಧಿಸಿದಂತೆ ಶಿಕ್ಷಕರಲ್ಲಿ ಇರುವ ಅರ್ಥವು ಅದು ಅನನ್ಯವೂ ವಿಶಿಷ್ಟವಾದುದೂ ಆಗಿರಬೇಕು ಎನ್ನುವಂತಿದೆ. ಇದನ್ನು ಅವರು ಭಾಷೆಯ ಬೆಳವಣಿಗೆಯ ದೃಷ್ಟಿಕೋನದಿಂದ ನೋಡುತ್ತಿಲ್ಲ. ಕೇವಲ ಬುದ್ಧಿವಂತ ಮಕ್ಕಳಲ್ಲಿ ಮಾತ್ರ ಇಂತಹ ಅಭಿವ್ಯಕ್ತಿಯನ್ನು ಕಾಣಬಹುದು ಎನ್ನುವ ಭಾವನೆಯನ್ನು ಹೊಂದಿರುವುದು ಕಂಡುಬಂದಿತು.

**ಸೃಜನಾತ್ಮಕ ಬರವಣಿಗೆಗೆ ಅವಕಾಶಗಳನ್ನು ಒದಗಿಸಿಕೊಡುವುದರ ಮಹತ್ವ:** ಶಿಕ್ಷಕರು ಇಂತಹ ಅವಕಾಶಗಳನ್ನು ಕೊಡುವುದು ಅತ್ಯಂತ ಮುಖ್ಯ ಎಂದು ಭಾವಿಸುತ್ತಾರೆ. ಒಬ್ಬ ಶಿಕ್ಷಕರು ಹಿಂದಿ ಚಲನಚಿತ್ರವಾದ 'ತಾರೇ ಜಮೀನ್ ಪರ್' ಅನ್ನು ಉಲ್ಲೇಖಿಸಿ, ಮಕ್ಕಳಿಗೆ ಅವರ ಸೃಜನಾತ್ಮಕ ಚಟುವಟಿಕೆಗೆ ಅವಕಾಶಗಳನ್ನು ನೀಡಬೇಕಾದ ಮಹತ್ವದ ಬಗೆಗೆ ಆ ಚಲನಚಿತ್ರ ತನ್ನ ಮನಸ್ಸಿನಲ್ಲಿ ಉಂಟು ಮಾಡಿದ ಪ್ರಭಾವದ ಬಗ್ಗೆ ತಿಳಿಸಿದರು.

**ಸ್ವತಂತ್ರವಾದ ಮತ್ತು ಸೃಜನಾತ್ಮಕ ಅಭಿವ್ಯಕ್ತಿಯಲ್ಲಿ ಮಕ್ಕಳ ಸಾಮರ್ಥ್ಯ:** ಒಂದು ಶಾಲೆಯಲ್ಲಿ ವಾರ್ಷಿಕ ಸ್ಪರ್ಧೆಯ ಭಾಗವಾಗಿ ಹಿಂದಿನ ವರ್ಷಗಳಿಗಿಂತ (ಆಗ ವಿಷಯ ಕೊಟ್ಟು ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿತ್ತು) ಭಿನ್ನವಾಗಿ ಯಾವುದೇ ವಿಷಯವನ್ನು

ನೀಡದೆ ಮಕ್ಕಳು ತಮ್ಮಿಷ್ಟದ ವಿಷಯದ ಬಗೆಗೆ ಚಿತ್ರ ಬಿಡಿಸಲು ಸ್ಪರ್ಧೆಯನ್ನು ಆಯೋಜಿಸಲಾಗುತ್ತಿತ್ತು. ವಿಷಯವನ್ನು ನೀಡದೆ ಇದ್ದರೂ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಮಕ್ಕಳು ಬಿಡಿಸಿದ ಚಿತ್ರಗಳಲ್ಲಿ ಅಂತಹ ವ್ಯತ್ಯಾಸಗಳು ಕಂಡುಬರಲಿಲ್ಲ. ಹೆಚ್ಚಿನ ಚಿತ್ರಗಳ ಥೀಮ್‌ಗಳು, ಒಂದೋ ಈ ಹಿಂದೆ ಶಾಲೆಗಳಲ್ಲಿಯೋ ಅಥವಾ ಅವರ ಪೋಷಕರು ಇಲ್ಲವೇ ಸ್ನೇಹಿತರು ಹೇಳಿಕೊಟ್ಟದ್ದೋ ಆಗಿರುತ್ತಿದ್ದವು. ಈ ವಿಚಾರವಾಗಿ ಶಿಕ್ಷಕರು ನಮ್ಮಲ್ಲಿ ಹಂಚಿಕೊಂಡ ಪ್ರಕಾರ, ಮಕ್ಕಳಿಗೆ ತಮಗೆ ತೋಚಿದುದನ್ನು ಬರೆಯಿರಿ ಎಂದಾಗ ಅವರು ಶಿಕ್ಷಕರಲ್ಲಿಗೆ ಮರಳಿ 'ನಾವೇನು ಬರೆಯಬೇಕು?' 'ನಾನೇನು ಮಾಡಬೇಕು?' 'ನನಗೆ ಏನೂ ತೋಚುತ್ತಿಲ್ಲ' ಎಂದು ಹೇಳುತ್ತಿದ್ದರಂತೆ. ಇನ್ನೊಬ್ಬರು ಶಿಕ್ಷಕರ ಅಭಿಪ್ರಾಯವೆಂದರೆ, ಮಕ್ಕಳಿಗೆ ಸೃಜನಾತ್ಮಕವಾದ ಅಭಿವ್ಯಕ್ತಿಯ ಸಾಮರ್ಥ್ಯವಿದ್ದರೂ ಸಹ ವ್ಯಾಕರಣಬದ್ಧವಾಗಿ ವಾಕ್ಯ ರಚಿಸುವುದು ಅವರಿಗೆ ಈಗಲೂ ಕಷ್ಟವಾದದ್ದರಿಂದ ಅವರಿಗೆ ಸ್ವತಂತ್ರವಾಗಿ ಬರೆಯಲಾಗುತ್ತಿಲ್ಲ. ಅವರಲ್ಲಿ ಸ್ವತಂತ್ರವಾದ ಅಭಿವ್ಯಕ್ತಿಗೆ ಅಗತ್ಯವಾದ ಅಡಿಪಾಯವು ಇನ್ನೂ ನಿರ್ಮಾಣವಾಗಿಲ್ಲ. ಶಿಕ್ಷಕರ ಪ್ರಕಾರ ಮಕ್ಕಳು ತಮ್ಮದೇ ಸೃಜನಾತ್ಮಕವಾದ ಅಭಿವ್ಯಕ್ತಿಯಲ್ಲಿ ತೊಡಗಿಕೊಳ್ಳಲು ಅವರಿಗೆ ಶಿಕ್ಷಕರಿಂದ ಖಚಿತವಾದ ಸೂಚನೆಗಳ ಅಗತ್ಯವಿದೆ. ಕೆಲವು ಶಿಕ್ಷಕರ ಪ್ರಕಾರ ಸರ್ಕಾರಿ ಶಾಲೆಗಳಿಗೆ ಬರುವ ಮಕ್ಕಳಲ್ಲಿ ಸ್ವಂತವಾಗಿ ಬರೆಯುವ ಕೌಶಲ್ಯಗಳಿರುವುದಿಲ್ಲ. ಇಲ್ಲಿ ಸ್ಪಷ್ಟವಾದುದೇನೆಂದರೆ ಈ ಶಿಕ್ಷಕರುಗಳ ಅರ್ಥದಲ್ಲಿ ಸೃಜನಶೀಲವಾದದ್ದು ಎಂದರೆ ಅದು ವಿಶಿಷ್ಟವಾಗಿರುವಂಥದ್ದೇ ಆಗಿದೆ.

**ತರಗತಿಯೊಳಗೆ ಸೃಜನಾತ್ಮಕವಾದ ಅಭಿವ್ಯಕ್ತಿಗೆ ಅವಕಾಶಗಳು:** ಕೆಲವು ಶಿಕ್ಷಕರ ಪ್ರಕಾರ ಮಕ್ಕಳ ಸ್ವತಂತ್ರ ಅಭಿವ್ಯಕ್ತಿಗೆ ಅವರು ಸಾಕಷ್ಟು ಅವಕಾಶಗಳನ್ನು ಒದಗಿಸಿಕೊಟ್ಟಿದ್ದಾರೆ. ಪಠ್ಯಪುಸ್ತಕದಲ್ಲಿಯೂ ಇಂತಹ ಸೃಜನಾತ್ಮಕ ಚಟುವಟಿಕೆಗಳಿಗೆ ಅವಕಾಶಗಳಿವೆ. ಪ್ರತಿ ಪಾಠವೂ ಮಕ್ಕಳಲ್ಲಿ ಸಹಜವಾದ ಆಲೋಚನೆ ಮತ್ತು ಬರವಣಿಗೆಗೆ ಪೂರಕವಾದ ಪ್ರೇರಣಾ ಚಟುವಟಿಕೆಗಳಿಂದಲೇ ಅಂತ್ಯಗೊಳ್ಳುತ್ತವೆ. ಇವು ಪಾಠದ ಕೊನೆಯಲ್ಲಿ ಬರುತ್ತವೆ ಮತ್ತು ಮೌಲ್ಯಮಾಪನಕ್ಕೆ ಒಳಪಡುವುದಿಲ್ಲ. ಇವುಗಳು ಹೆಚ್ಚು ಸಮಯವನ್ನು ಬೇಡುವುದರಿಂದ ಇವನ್ನು ತರಗತಿಗಳಲ್ಲಿ ಮಾಡುವುದು ಕಷ್ಟಕರ ಎಂದು ಶಿಕ್ಷಕರು ಹೇಳುತ್ತಾರೆ. ಶಾಲೆಗಳಲ್ಲಿ ನಡೆಸಲಾಗುವ ಹಲವು ಸ್ಪರ್ಧೆಗಳು ಸೃಜನಾತ್ಮಕ ಆಲೋಚನೆ ಮತ್ತು ಬರವಣಿಗೆಗೆ ಹೆಚ್ಚು ಅವಕಾಶಗಳನ್ನು ನೀಡುತ್ತವೆ. ಉದಾಹರಣೆಗೆ 'ಪ್ರತಿಭಾ ಕಾರಂಜಿ' ಕಾರ್ಯಕ್ರಮದಲ್ಲಿ (ಈ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರ ನಡೆಸುತ್ತಿದ್ದು ಕ್ಲಸ್ಟರ್, ಬ್ಲಾಕ್, ಜಿಲ್ಲೆ ಮತ್ತು ರಾಜ್ಯ ಮಟ್ಟಗಳಲ್ಲಿ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಲು ವಿದ್ಯಾರ್ಥಿಗಳಿಗೆ ವೇದಿಕೆಯನ್ನು ಒದಗಿಸಲಾಗುತ್ತದೆ) ಮಕ್ಕಳು ಪ್ರಬಂಧ, ಆಶುಭಾಷಣ, ಚಿತ್ರ ಬಿಡಿಸುವುದು, ಕಥೆ ಹೇಳುವುದು ಮುಂತಾದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ. ಇವೂ ಕೂಡ ಒಂದು ರೀತಿಯಲ್ಲಿ ಸೃಜನಾತ್ಮಕ ಅಭಿವ್ಯಕ್ತಿಗೆ ಇರುವ ಅವಕಾಶವೆಂದು ಶಿಕ್ಷಕರು ಹೇಳುತ್ತಾರೆ. ಆದರೆ ಇಂತಹ ಪ್ರಯತ್ನಗಳನ್ನು ಮಕ್ಕಳೇ ಸ್ವತಃ ಮಾಡುತ್ತಾರೆ ಎನ್ನುವುದಕ್ಕಿಂತ, ಹೆಚ್ಚು ಶಿಕ್ಷಕರಿಂದ ಮಾರ್ಗದರ್ಶಿತವಾಗಿಯೇ ಸಾಗುತ್ತಾ ಇವೆ ಎಂಬುದು ಅವರ ಅನಿಸಿಕೆ.

**ಸ್ವತಂತ್ರ ಆಲೋಚನೆಯಲ್ಲಿ ಮನೆ ಭಾಷೆಯ ಪ್ರಭಾವ:** ಈ ವಿಷಯವಾಗಿ ಮಾತನಾಡಿದಾಗ, ಶಿಕ್ಷಕರು, ನಾವು ಮಗುವಿನ ಮನೆ ಭಾಷೆಗೆ ಪ್ರೋತ್ಸಾಹ ನೀಡುತ್ತೇವೆ ಹಾಗೂ ಪಾಠವನ್ನು ಸಹ ಅದೇ ಸ್ಥಳೀಯ ಧಾಟಿಯಲ್ಲಿ ಹೇಳಿಕೊಡುತ್ತೇವೆ ಎಂದು ಹೇಳಿದರು. ಆದರೆ, ಮುಂದೆ ಮಕ್ಕಳಿಗೆ ಚಟುವಟಿಕೆ ನೀಡಿದಾಗ ಮಕ್ಕಳ ಬರೆವಣಿಗೆಯಲ್ಲಿ ಆ ಧಾಟಿ ಕಾಣಿಸಿಕೊಳ್ಳಲಿಲ್ಲ. ಈ ಬಗ್ಗೆ ಶಿಕ್ಷಕರಲ್ಲಿ ಮಾತನಾಡಿದಾಗ, ಮಗುವು ಶಾಲೆಗೆ ಬರುವುದೇ ಗ್ರಾಂಥಿಕವಾದ ಭಾಷೆಯ ಮೇಲೆ ಹಿಡಿತ ಸಾಧಿಸಲು, ಹಾಗಾಗಿ ಮಕ್ಕಳು ಹಾಗೆ ಬರೆದಿದ್ದುದರಲ್ಲಿ ಆಶ್ಚರ್ಯವಿಲ್ಲ ಎಂದು ಹೇಳಿದರು.

ಒಟ್ಟಾರೆಯಾಗಿ, ಶಿಕ್ಷಕರ ಪ್ರಕಾರ ಮಕ್ಕಳಲ್ಲಿ ಸೃಜನಾತ್ಮಕ ಮತ್ತು ಸ್ವತಂತ್ರ ಅಭಿವ್ಯಕ್ತಿಯನ್ನು ಪೋಷಿಸುವುದು ಅಪೇಕ್ಷಿತವಾಗಿದ್ದರೂ, ಅದನ್ನು ಮಾಡಲಾಗುತ್ತಿಲ್ಲ. ಅದಕ್ಕೆ ಕಾರಣ ಸಮಯದ ಅಭಾವ, ಮಕ್ಕಳಲ್ಲಿನ ಸಾಮರ್ಥ್ಯದ ಕೊರತೆ, ವ್ಯಾಕರಣಬದ್ಧವಾಗಿ ಅವರು ಬರೆಯಲಾಗದಿರುವುದು, ಅವರಲ್ಲಿನ ಮೂಲ ಬರವಣಿಗೆ ಕೌಶಲ್ಯದ ಕೊರತೆ ಇತ್ಯಾದಿ. ಈ ದೃಷ್ಟಿಕೋನಗಳು ಸೃಜನಾತ್ಮಕ ಮತ್ತು ಸ್ವತಂತ್ರವಾದ ಅಭಿವ್ಯಕ್ತಿಗಳನ್ನು ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ನೋಡುವುದರ ಕುರಿತು ಶಿಕ್ಷಕರ ಕಲಿಕೆಯ ಮೇಲೆ ಪ್ರಭಾವವನ್ನು ಬೀರುತ್ತವೆ. ಸೃಜನಾತ್ಮಕ ಮತ್ತು ಸ್ವತಂತ್ರ ಅಭಿವ್ಯಕ್ತಿ ಎನ್ನುವುದು ತುಂಬಾ ವಿಶಿಷ್ಟವಾದುದು ಮತ್ತು ಕೇವಲ ಕೆಲವೇ ಮಕ್ಕಳು ಇದನ್ನು ಮಾಡಲು ಸಾಧ್ಯವಾಗುವಂತಹದ್ದೇನಲ್ಲ. ಶಿಕ್ಷಕರು ತಮ್ಮ ಪಾಠಗಳ ಜೊತೆಯೇ ಈ ರೀತಿಯ ಚಟುವಟಿಕೆಗಳನ್ನು ಸಮ್ಮಿಳಿತಗೊಳಿಸಿ ಅಥವಾ ಪಾಠದ ಕೊನೆಯಲ್ಲಿ ಇಂತಹ ಚಟುವಟಿಕೆಗಳನ್ನು ವಿದ್ಯಾರ್ಥಿಗಳಿಗೆ ನೀಡುವ ಮೂಲಕ ಇಲ್ಲವೇ ವಿನ್ಯಾಸಗೊಳಿಸುವ ಮೂಲಕ ಈ ಅಭಿವ್ಯಕ್ತಿಗೆ ಅವಕಾಶ ಒದಗಿಸುವ ಕಾರ್ಯತಂತ್ರಗಳನ್ನು ರೂಪಿಸಿಕೊಳ್ಳಬೇಕು. ಇನ್ನೂ ಮುಖ್ಯವಾಗಿ ಶಿಕ್ಷಕರೊಂದಿಗೆ ಮಾತನಾಡುವಾಗ ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಅಗತ್ಯವಾದ ಅವಕಾಶಗಳನ್ನು ನೀಡದಿರುವುದರ ಪರಿಣಾಮಗಳ ಬಗ್ಗೆ ಸಹ ಒತ್ತು ನೀಡಿ ಚರ್ಚಿಸಬೇಕು.

## ಭಾಗ – 2

## ಮಕ್ಕಳ ಸೃಜನಾತ್ಮಕ ಬರವಣಿಗೆಗೆ ಚಟುವಟಿಕೆಗಳು

ಯಾವ ರೀತಿಯ ಚಟುವಟಿಕೆಗಳು ನಿಜವಾಗಿಯೂ ಮಕ್ಕಳಿಗೆ ಮುಕ್ತ ಅವಕಾಶವನ್ನು ಒದಗಿಸಿ ಅವರಲ್ಲಿ ಸೃಜನಶೀಲತೆಯನ್ನು ಬೆಳೆಸಲು ನೆರವಾಗುವುವೋ ಅಂತಹ ಕಲಿಕಾ ಚಟುವಟಿಕೆಗಳನ್ನು ಶಿಕ್ಷಕರು ರೂಪಿಸಿದರೆ ಅವು ಸಹಜವಾಗಿಯೇ ಮುಕ್ತ ಅವಕಾಶ ಮತ್ತು ಸೃಜನಶೀಲ ಚಟುವಟಿಕೆಗಳಾಗಿ ಮಾರ್ಪಡುತ್ತವೆ. ಅಲ್ಲದೆ ಮಕ್ಕಳು ಆತಂಕವಿಲ್ಲದೆ ಅವುಗಳಲ್ಲಿ ತೊಡಗಿಕೊಳ್ಳುತ್ತಾರೆ ಎನ್ನುವುದನ್ನು ಶಿಕ್ಷಕರಿಗೆ ಮನಗಾಣಿಸಲು ಮಂಡ್ಯ ಉತ್ತರ ಬ್ಲಾಕ್‌ನ ಮೂರು ಶಾಲೆಗಳ ಆರನೇ ತರಗತಿಯ ಮಕ್ಕಳಿಗೆ ಸಂಕೀರ್ಣವಲ್ಲದ ಮೂರು ಚಟುವಟಿಕೆಗಳನ್ನು ತರಗತಿಯಲ್ಲಿ ಮಾಡಿಸಿ ಪಡೆದ ಫಲಿತಗಳನ್ನು ಕೆಳಗಿನಂತೆ ದಾಖಲಿಸಲಾಗಿದೆ.

## ಚಟುವಟಿಕೆ – 1: ಖಾಲಿ ಹಾಳೆಯಲ್ಲಿ ಮುಕ್ತ ಬರೆವಣಿಗೆ

ಮಕ್ಕಳಿಗೆ ಎ4 ಅಳತೆಯ ಖಾಲಿ ಹಾಳೆಯನ್ನು ನೀಡಿ, "ನಿಮಗನ್ನಿಸಿದ್ದನ್ನು ಬರೆಯಿರಿ" ಎಂದು ಹೇಳಲಾಯಿತು. ಮಕ್ಕಳು, "ಸರ್, ಏನು ಬರೆಯಬೇಕು?" ಎಂದು ಮತ್ತೆ ಮತ್ತೆ ಕೇಳಿದರು. ಅದರಲ್ಲಿ ಕೆಲವರು, "ಯಾವುದಾದರೂ ಒಂದು ವಿಷಯವನ್ನು ಕೊಡಿ" ಎಂದು ಒತ್ತಾಯಿಸಿದರು. ಆದರೆ "ನಿಮಗನ್ನಿಸಿದ್ದನ್ನೇ ಬರೆಯಿರಿ" ಎಂದು ಎರಡು ಮೂರು ಬಾರಿ ಪುನರುಚ್ಚರಿಸಲಾಯಿತು. ಒಂದೆರಡು ಮಕ್ಕಳು ಬರೆದಂತೆ ನಟಿಸುತ್ತಿದ್ದರಾದರೂ ಏನನ್ನೂ ಬರೆಯಲಿಲ್ಲ. ಮಕ್ಕಳು ಬರೆಯುವ ಮೊದಲು ಮತ್ತೆ ಕೇಳಿದರು, "ಸರ್ ಬಾರ್ಡರ್ ಹಾಕಬೇಕಾ?" ಎಂದು. ಅದಕ್ಕೆ ಮತ್ತೇ 'ನಿಮಗನ್ನಿಸಿದ್ದು' ಎನ್ನುವುದನ್ನು ಬಿಟ್ಟು ನಾನೇನನ್ನೂ ಹೇಳಲಿಲ್ಲ.

## ಅವಲೋಕನಗಳು ಮತ್ತು ಪರ್ಯಾಲೋಚನೆಗಳು

- ✶ ಮೊದಲಿಗೆ ಮಕ್ಕಳಿಗೆ ಏನಾದರೂ ಬರೆಯಿರಿ ಎಂದು ಹೇಳಿದಾಗ ಗೊಂದಲಕ್ಕೆ ಒಳಗಾಗುತ್ತಾರೆ. ಕಾರಣ ಮಕ್ಕಳಿಗೆ ಯಾವಾಗಲೂ ಸೂಚನೆಯನ್ನು ಪಡೆದೇ ಮುಂದೆ ಸಾಗುವುದು ಅಭ್ಯಾಸವಾಗಿಬಿಟ್ಟಿದೆ.
- ✶ ಕೆಲವು ಮಕ್ಕಳು ಬಿಡುವಿನ ವೇಳೆಯಲ್ಲಿ ಪುಸ್ತಕದಿಂದ ಅದರಲ್ಲೂ ಪಠ್ಯ ಪುಸ್ತಕದಿಂದಲೇ ಚಿತ್ರವನ್ನು ನಕಲು ಮಾಡುತ್ತಿದ್ದರು. ಆದರೆ ಅದರ ಬಗ್ಗೆ ಏನು ಬರೆಯಬೇಕೆಂದು ಅವರಿಗೆ ಗೊತ್ತಿರಲಿಲ್ಲ. ಪಾಠವನ್ನು ನಕಲು ಮಾಡುವುದನ್ನು ಕಲಿತಿರುವುದರಿಂದ ಮತ್ತು ಸ್ವತಂತ್ರವಾಗಿ ಏನನ್ನಾದರೂ ಬರೆಯಬೇಕಾದುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ನಕಲು ಮಾಡುವ ಪ್ರಕ್ರಿಯೆ ಅವರಿಗೆ ಹೆಚ್ಚು ಸುಲಭ ಎನ್ನಿಸಿ ಅದನ್ನೇ ಮಾಡಲು ಹೆಚ್ಚು ಖುಷಿ ಪಡುವಂತಿತ್ತು.
- ✶ ಬಹುತೇಕ ಮಕ್ಕಳು ಬರೆಯುವುದಕ್ಕಿಂತ ಚಿತ್ರ ಬಿಡಿಸುವುದನ್ನೇ ಆಯ್ಕೆ ಮಾಡಿಕೊಂಡಿದ್ದರು. ಅವರಲ್ಲೂ ಬರೆಯಲು ಪ್ರಯತ್ನ ಮಾಡಿದವರ ಸಂಖ್ಯೆ (ಅದಕ್ಕೆ ಅಡಿಬರಹ ಮತ್ತು ಅದರ ಬಗೆಗೆ ಬರೆದು ಕೊಟ್ಟವರ ಸಂಖ್ಯೆ) ಬಹಳ ಕಡಿಮೆ ಇತ್ತು. ಅಂದಹಾಗೆ ಚಿತ್ರಗಳ ಬಗ್ಗೆ ಅವರಿಗೆ ಮಾತನಾಡಲು ಸಾಧ್ಯವಾಯಿತು.
- ✶ ಕೆಲವು ಮಕ್ಕಳು ಹಾಳೆಯ ತೀರ ಸಣ್ಣ ಮೂಲೆಯಲ್ಲಿ ಚಿಕ್ಕ ಚಿತ್ರ ಬಿಡಿಸಿದ್ದರು. ಕಾರಣ ಕೇಳಿದರೆ "ಸರ್, ಪೂರ್ತಿ ಹಾಳೆ ಹಾಳಾಗಿ ಹೋದರೆ ಏನು ಮಾಡುವುದು?" ಎಂಬ ಭಯವನ್ನು ವ್ಯಕ್ತಪಡಿಸಿದರು. ತಮ್ಮ ಬರವಣಿಗೆ ಮಹತ್ವವನ್ನು ಹೊಂದಿದೆ ಎಂದು ಅವರಿಗೆ ಅನಿಸಲಿಲ್ಲ, ಬದಲಾಗಿ ತಾವು ತಪ್ಪು ಮಾಡಿದರೆ ಏನಾಗುತ್ತದೆ ಎನ್ನುವ ಭಯವೇ ಅವರಲ್ಲಿದ್ದಿತ್ತು.
- ✶ ಚಿತ್ರ ಬರೆದ ಮಕ್ಕಳಲ್ಲಿ ಅರ್ಧಕ್ಕಿಂತ ಹೆಚ್ಚಿನವರು 'ಮನೆ'ಯ ಚಿತ್ರವನ್ನು ರಚಿಸಿದ್ದರು. "ನೀವು ಬರೆದ ಮನೆಯ ಚಿತ್ರ ನಿಮ್ಮ ಮನೆಯದ್ದೇ?" ಎಂದು ಕೇಳಿದಾಗ ಅವರ ಉತ್ತರವು ನೇತ್ಯಾತ್ಮಕವಾಗಿತ್ತು. ಚಿತ್ರಕ್ಕೆ ಕೇವಲ ಕೆಲವರೇ "ಇದು ನನ್ನ ಮನೆ", "ನನ್ನ ಮನೆ ನನಗೆ ಇಷ್ಟ" ಈ ತರಹದ ಎರಡು ಅಥವಾ ಮೂರು ಪದದ ವಾಕ್ಯವನ್ನು ಮಾತ್ರ ಬರೆದಿದ್ದರು.

| ಸ್ತರ – 1 | ಸ್ತರ – 2 | ಸ್ತರ – 3 | ಸ್ತರ – 4 |
|---|---|---|---|
| ಕೊಟ್ಟಿರುವ ಚಿತ್ರದಲ್ಲಿ ಒಂದೇ ಪದದಲ್ಲಿ ಹೆಸರುಗಳನ್ನು ಬರೆಯಲು ಶಕ್ತರಾಗುವುದು.<br>ಉದಾಹರಣೆಗೆ –<br>ಹಸು, ಗುಡಿಸಲು | ಸರಳ ವಾಕ್ಯದೊಂದಿಗೆ ಚಿತ್ರದ ಸನ್ನಿವೇಶದ ಬಗ್ಗೆ ಬರೆಯಲು ಶಕ್ತರಾಗುವುದು.<br>ಉದಾಹರಣೆಗೆ –<br>“ದನಕ್ಕೆ ಸ್ನಾನ ಮಾಡಿಸುತ್ತಿದ್ದಾನೆ.”<br>“ಮಕ್ಕಳು ಆಟವಾಡುತ್ತಿದ್ದಾರೆ.” | ಚಿತ್ರದ ಸಂದರ್ಭದಲ್ಲಿ ಕಾಣುವ ಭಾವನೆಗಳನ್ನು ಗ್ರಹಿಸಿ ಸಂಕೀರ್ಣ ವಾಕ್ಯಗಳಲ್ಲಿ ವಿವರಿಸುವ ಸಾಮರ್ಥ್ಯ.<br>ಉದಾಹರಣೆಗೆ –<br>“ದನಕ್ಕೆ ತುಂಬಾ ಸೆಖೆಯಾಗಿರುವುದರಿಂದ ರೈತನಿಗೆ ಸ್ನಾನ ಮಾಡಿಸಲು ಹೇಳಿತು.”<br>“ಮಕ್ಕಳು ಮಧ್ಯಾಹ್ನದಲ್ಲಿ ತುಂಬ ಖುಷಿಯಿಂದ ಜೋರಾಗಿ ಕಿರುಚಿಕೊಂಡು ಆಡುತ್ತಿದ್ದಾರೆ.” | ಚಿತ್ರ ಏನು ಮತ್ತು ಯಾರನ್ನು ಕುರಿತಾದದ್ದು ಎಂಬುದನ್ನು ಕಥೆಯ ರೂಪದಲ್ಲಿ ಬರೆಯಲು ಶಕ್ತರಾಗುವುದು.<br>– ಒಟ್ಟಾರೆಯಾಗಿ ಚಿತ್ರದ ವಿಷಯ, ಸಾರಾಂಶ, ಮುಖ್ಯ ಪಾತ್ರಗಳನ್ನು, ಘಟನೆಗಳನ್ನು ಗುರುತಿಸಿ ಆ ಕುರಿತಾಗಿ ವಿವರಿಸುವ ಸಾಮರ್ಥ್ಯ.<br>ಉದಾಹರಣೆಗೆ –<br>“ಒಂದು ಬೇಸಿಗೆಯಲ್ಲಿ ದನವೊಂದಕ್ಕೆ ತುಂಬ ಸೆಖೆಯಾಗಿತ್ತು. ಆಗ ಅಲ್ಲಿಗೆ ಬಾತುಕೋಳಿಯೊಂದು ಬಂದಿತು. ಅದಕ್ಕೆ ದನವು ತನ್ನ ಕಷ್ಟವನ್ನು ಹೇಳಿಕೊಂಡು.......... ಸ್ನಾನ ಮಾಡಿಸಿಕೊಂಡಿತು.” |

* ಕೇವಲ 5 ಮಕ್ಕಳು ಮಾತ್ರ ಕವನ ಬರೆದಿದ್ದರು, (ನಾನು ಕಣ್ಣು ಹೊಡೆದೆ ಅವಳು ಮಾಡಿದಳು ಕಣ್ಣ ಸನ್ನೆ ....). ನಾನು, "ಇದನ್ನು ನೀನು ಎಲ್ಲಿ ನೋಡಿದೆ?" ಎಂದು ಆ ವಿದ್ಯಾರ್ಥಿಯನ್ನು ಕೇಳಿದಾಗ, "ಆಟೋ ಹಿಂದೆ ಬರೆದಿತ್ತು" ಎಂದು ಹೇಳಿದ. ನಾನು ಇದರ ಅರ್ಥ ಕೇಳಿದಾಗ ಹೇಳಲಾಗಲಿಲ್ಲ.
* ಚಿತ್ರ ಬರೆಯುವುದರಲ್ಲೂ ಲಿಂಗಾಧಾರಿತ ಭಿನ್ನತೆ ಇತ್ತು. ಕೆಲವು ಹೆಣ್ಣು ಮಕ್ಕಳು ರಂಗೋಲಿ ಬಿಡಿಸಿದ್ದರು (ನೆಲದ ಮೇಲೆ ಆಲಂಕಾರಿಕವಾಗಿ ಬಿಡಿಸುವ ವಿನ್ಯಾಸದ್ದು). ಆದರೆ ಯಾವ ಗಂಡು ಮಕ್ಕಳೂ ರಂಗೋಲಿಯನ್ನು ಬರೆದಿದ್ದು ಕಾಣಲಿಲ್ಲ.

ಒಟ್ಟಾರೆ ಈ ಚಟುವಟಿಕೆಯಿಂದ ತಿಳಿದುಬಂದದ್ದೇನೆಂದರೆ, ಸ್ವಲ್ಪ ಮಟ್ಟಿನ ಪ್ರೋತ್ಸಾಹ ಮತ್ತು ಬೆಂಬಲ ದೊರೆತರೆ ಮಕ್ಕಳು ಅಭಿವ್ಯಕ್ತಿಸಲು ಶಕ್ಯರಾಗಿದ್ದಾರೆ ಎಂದು.

## ಚಟುವಟಿಕೆ – 2: ಚಿತ್ರ ನೋಡಿ ಬರೆಯುವುದು

ಈ ಚಟುವಟಿಕೆಯಲ್ಲಿ ಎರಡು ಚಿತ್ರಗಳನ್ನು ನೀಡಿ ಅವರಿಗೆ ಒಂದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನೂ ಸಹ ನೀಡಲಾಗಿತ್ತು. ಕೊಟ್ಟ ಎರಡೂ ಚಿತ್ರಗಳು ಪರಿಚಿತ ಸನ್ನಿವೇಶದ ಚಿತ್ರಗಳೇ ಆಗಿದ್ದವು. ಈ ಚಟುವಟಿಕೆಯನ್ನು ಸುಮಾರು 36 ಮಕ್ಕಳಿಂದ ಮಾಡಿಸಲಾಗಿದೆ.

ಈ ಕೆಳಕಂಡಂತೆ ಮಕ್ಕಳು ಚಟುವಟಿಕೆಯಲ್ಲಿ ನೀಡಿದ ಪ್ರತಿಕ್ರಿಯೆಗಳನ್ನು (ಚಟುವಟಿಕೆಗೆ ಸಂಬಂಧಿಸಿದಂತೆ 4 ಸ್ತರಗಳಲ್ಲಿ ವಿಭಜಿಸಿ ಒಂದನೇ ಸ್ತರ ಕನಿಷ್ಠವೆಂದು ನಾಲ್ಕನೇ ಸ್ತರವನ್ನು ಗರಿಷ್ಠವೆಂದು ಪರಿಗಣಿಸಲಾಗಿದೆ) 6ನೇ ತರಗತಿಯ ಕಲಿಕಾ ಸಾಮರ್ಥ್ಯವನ್ನು ಆಧರಿಸಿ ವಿಭಾಗಿಸಿ ಫಲಿತವನ್ನು ವಿಮರ್ಶಿಸಲಾಗಿದೆ.

## ವಿಶ್ಲೇಷಣೆ ಮತ್ತು ಪರ್ಯಾಲೋಚನೆಗಳು

- ಭಾಗವಹಿಸಿದ ಅರ್ಧದಷ್ಟು ಮಕ್ಕಳು 2ನೇ ಸ್ತರವನ್ನು ದಾಟಿರುವುದಿಲ್ಲ. ಹೆಚ್ಚು ಸರಳ ವಾಕ್ಯಗಳನ್ನೇ ಬರೆಯಲು ಸೀಮಿತಗೊಳ್ಳುತ್ತಿದ್ದರು. ಮಕ್ಕಳು ವ್ಯಾಕರಣದ ಸಂರಚನಾ ನಿಯಮಗಳ ಬಗೆಗೆ ಗೊತ್ತಿದ್ದರೂ ಬರವಣಿಗೆಯಲ್ಲಿ ಆಗಬಹುದಾದ ದೋಷಕ್ಕೆ ಹೆದರಿ, ಉದ್ದ ವಾಕ್ಯಗಳನ್ನು ಬರೆಯಲು ಹಿಂಜರಿಯುತ್ತಿದ್ದರು.
- ಶೇಕಡ 15ರಷ್ಟು ಮಕ್ಕಳು ಮಾತ್ರ ಮೂರನೇ ಹಂತ ತಲುಪಿದ್ದಾರೆ. ಅಂದರೆ ಚಿತ್ರದಲ್ಲಿನ ಸನ್ನಿವೇಶವನ್ನು, ಪಾತ್ರಗಳನ್ನು ವಿವರಿಸಿ ಐದರಿಂದ ಆರು ವಾಕ್ಯ ಬರೆದಿದ್ದರು.
- ನಾಲ್ಕನೇ ಹಂತವನ್ನು ಕೇವಲ ಶೇ.3ರಷ್ಟು ಮಕ್ಕಳು ಮಾತ್ರ ತಲುಪಿದರು. ಅವರು ಸಂಕೀರ್ಣವಾದ ವಾಕ್ಯಗಳನ್ನು ಬಳಸಿಕೊಂಡು ಕಥೆ ಬರೆದಿದ್ದರು.
- ಮಗುವನ್ನು ಚಿತ್ರದ ಬಗ್ಗೆ ಮಾತನಾಡಲು ಹೇಳಿದ ಕೂಡಲೇ, ಅವರ ಮನಸ್ಸಿನಲ್ಲಿ ಹಲವು ಆಲೋಚನೆಗಳು ಬಂದರೂ ಕೂಡ ಮಕ್ಕಳಿಗೆ ಇದೇ ರೀತಿ

ಬರೆಯಲು ಹೇಳಿದಾಗ ಸರಿಯಾದ ವ್ಯಾಕರಣವನ್ನು ಬಳಸಿ ವಾಕ್ಯಗಳನ್ನು ರಚಿಸುವುದರಲ್ಲಿ ಕಷ್ಟಪಡುತ್ತಿದ್ದರು.

- ಮನೆ ಭಾಷೆಯ ಬಳಕೆ: ಚಿತ್ರದ ಬಗ್ಗೆ ಮಾತನಾಡಲು ಕೇಳಿದಾಗ ಮನೆ ಭಾಷೆಯನ್ನೇ ಮಕ್ಕಳು ಬಳಸುತ್ತಿದ್ದುದು ಕಂಡುಬಂತು. ಈ ಪ್ರವೃತ್ತಿ ಮೂರನೇ ಸ್ತರದಲ್ಲಿದ್ದ ಮಕ್ಕಳಲ್ಲಿತ್ತಲ್ಲದೆ ಅವರು ಮನೆಭಾಷೆಯೊಂದಿಗೆ ಗ್ರಾಂಥಿಕ ಭಾಷೆಯನ್ನೂ ಬಳಸುತ್ತಿದ್ದರು.
- ಕೆಲವೇ ಕೆಲವು ಬರಹಗಳು ಮಾತ್ರ ಸ್ತ್ರೀ ಸಂವೇದನೆಯನ್ನು ಹೊಂದಿದ್ದವು. ಪ್ರಾಯಶಃ ಚಿತ್ರವು ಅದಕ್ಕೆ ಅವಕಾಶವನ್ನು ಒದಗಿಸಿಕೊಡಲಿಲ್ಲವೆನ್ನಿಸುತ್ತದೆ.

ಒಟ್ಟಾರೆ, ಈ ಚಟುವಟಿಕೆಯಿಂದ ತಿಳಿದುಬಂದದ್ದೇನೆಂದರೆ, ಮಕ್ಕಳು ಸರಳವಾದ ವಾಕ್ಯಗಳಲ್ಲಿ ಚಿತ್ರದ ಕುರಿತು ತಮ್ಮ ಆಲೋಚನೆಯನ್ನು ವ್ಯಕ್ತಪಡಿಸಬಲ್ಲರು. ಆದರೆ, ಸ್ವತಂತ್ರವಾಗಿ ಮತ್ತು ಸೃಜನಶೀಲವಾಗಿ ಬರೆಯಲು, ಅವರಿಗೆ ವ್ಯಾಕರಣ ದೋಷದ ಭಯವು ಅಡ್ಡಿಯಾಗಿದೆ.

## ಚಟುವಟಿಕೆ – 3 : ವಾಕ್ಯವೃಂದವನ್ನು ಓದಿ, ಚಿತ್ರಮುಖೇನ ಅಭಿವ್ಯಕ್ತಿಸುವುದು

ಮಕ್ಕಳು ಗ್ರಾಂಥಿಕ ಭಾಷೆಯಲ್ಲಿರುವ ಈ ಕೆಳಗಿನ ಭಾಗವನ್ನು ಓದಿಕೊಂಡು ಅದರಲ್ಲಿನ ಸಂದೇಶವನ್ನು ಗ್ರಹಿಸಿ ಚಿತ್ರ ಬರೆಯುವಂತೆ ಹೇಳಲಾಯಿತು.

| |
|---|
| ಮಕ್ಕಳಿಗೆ ಕೊಟ್ಟ ಭಾಗ – ನಾನು ನಿನ್ನೆ ಭಿತ್ತಿ ಪತ್ರದಲ್ಲಿ ಪೊರಕೆಯನ್ನು ಹಿಡಿದ ಮಹಿಳೆಯನ್ನು ಹಾಗೂ ಒಂದು ಜೊತೆ ಕನ್ನಡಕವನ್ನು ನೋಡಿದೆ. ನಾನು ನನ್ನ ಸ್ನೇಹಿತನನ್ನು ಆ ಚಿತ್ರದ ಬಗ್ಗೆ ವಿಚಾರಿಸಿದಾಗ ಅದು 'ಸ್ವಚ್ಛ ಭಾರತ್' ಕುರಿತಾದದ್ದು. ಅಂತೆಯೇ ಆ ಕನ್ನಡಕ ಗಾಂಧೀಜಿಯದ್ದು. ಚಿತ್ರವು ಸ್ವಚ್ಛ ಭಾರತ್ ಗಾಂಧೀಜಿಯ ಕನಸು ಎಂದು ಸೂಚಿಸುವಂತಿದೆ ಎಂದು ಹೇಳಿದ. |

| ಸ್ತರ – 1 | ಸ್ತರ – 2 |
|---|---|
| ಕೊಟ್ಟಿರುವ ವಾಕ್ಯವನ್ನು ಓದಿಕೊಂಡು – ಕನ್ನಡಕ ಅಥವಾ ಪೊರಕೆಯ ಚಿತ್ರವನ್ನು ಬಿಡಿಸುವುದು. | ಕೊಟ್ಟಿರುವ ವಾಕ್ಯಗಳನ್ನು ಓದಿ ಅರ್ಥ ಮಾಡಿಕೊಂಡು, ಪೊರಕೆ ಹಿಡಿದ ಮಹಿಳೆ ಅಥವಾ ಕನ್ನಡಕ ಧರಿಸಿದ ಗಾಂಧೀಜಿಯ ಚಿತ್ರ ಬರೆದು ಅಲ್ಲಿನ ಗ್ರಹಿಕೆಯನ್ನು ಪ್ರತಿಪಾದಿಸುವುದು. |

ಕೆಳಗಿನ ಮಾರ್ಗಸೂಚಿ ಬಳಸಿ ಮಕ್ಕಳ ಅಭಿವ್ಯಕ್ತಿಯನ್ನು ಪರಿಶೀಲಿಸಲಾಯಿತು.

## ಅವಲೋಕನಗಳು ಮತ್ತು ಪರ್ಯಾಲೋಚನೆಗಳು

- ಕೆಲವು ಮಕ್ಕಳು ಆರಂಭದಲ್ಲಿ ಬರೆಯಲು ಹಿಂಜರಿದರಾದರೂ, ಇತರ ಮಕ್ಕಳು ಬರೆಯುವುದನ್ನು ನೋಡಿ ಬರೆಯಲು ಪ್ರೇರಿತರಾದರು.

- ಹೆಚ್ಚಿನ ಮಕ್ಕಳು ಒಂದನೇ ಹಂತದಲ್ಲಿದ್ದರು – ಮಕ್ಕಳು ಕನ್ನಡಕ ಅಥವಾ ಪೊರಕೆಯ ಚಿತ್ರವನ್ನು ಮಾತ್ರ ಬರೆದಿದ್ದರು.
- ಮಕ್ಕಳು ಈ ಚಟುವಟಿಕೆಯನ್ನು ಕಷ್ಟವೆಂದು ಭಾವಿಸಿದ್ದರು. ಮೌಖಿಕವಾಗಿ ಕೇಳಿದಾಗ ಕೇವಲ ಶೇ.5% ಮಕ್ಕಳು ಮಾತ್ರ ಕೊಟ್ಟ ಭಾಗದ ಒಟ್ಟು ಆಶಯವನ್ನು ಹೇಳಲು ಶಕ್ತರಾಗಿದ್ದರು. ಅಂತೆಯೇ ವಾಕ್ಯಗಳನ್ನು ಓದುತ್ತಿದ್ದರಾದರೂ ಅದರ ಒಟ್ಟು ಆಶಯವನ್ನು ಹೇಳಲು ಕಷ್ಟ ಪಡುತ್ತಿದ್ದರು.
- ಚಿತ್ರದಲ್ಲಿನ ವಾಕ್ಯಗಳು ಸ್ಥಳೀಯ ಭಾಷೆಯಲ್ಲಿದ್ದಿದ್ದರೆ, ಚಟುವಟಿಕೆಗೆ ಬೇರೆ ಫಲಿತ ಬರುತ್ತಿತ್ತೇನೋ ಎಂದು ಹೇಳುವುದು ಸ್ವಲ್ಪ ಕಷ್ಟಕರ.

## ಉಪಸಂಹಾರ

ಮೇಲಿನ ಮೂರು ಚಟುವಟಿಕೆಗಳ ಅವಲೋಕನಗಳು ಮತ್ತು ಪರ್ಯಾಲೋಚನೆಗಳನ್ನು ಆಧರಿಸಿ ಕೆಳಗಿನ ತೀರ್ಮಾನಗಳಿಗೆ ಬರಲಾಗಿದೆ.

- ಮಕ್ಕಳಿಗೆ ಸ್ವತಂತ್ರವಾದ ಅಭಿವ್ಯಕ್ತಿಯಲ್ಲಿ ತೊಡಗಲು ಅವಕಾಶಗಳನ್ನು ನೀಡುವ ಸಂದರ್ಭದಲ್ಲಿ ಎದುರಾಗುವ ಮೂರು ಮುಖ್ಯ ತೊಡಕುಗಳನ್ನು ನಿವಾರಿಸುವ ಪ್ರಯತ್ನ ಮಾಡಬೇಕು. ಒಂದು, ಸಾಮಾನ್ಯವಾಗಿ ಚಟುವಟಿಕೆಗಳನ್ನು ಮಾಡುವಾಗ ಅವರಲ್ಲಿ ಮೂಡುವ ಭಯಗಳನ್ನು (ನಾನು ಬರೆಯುವಾಗ / ಮಾತಾಡುವಾಗ ಏನಾದರೂ ತಪ್ಪು ಮಾಡುತ್ತಿದ್ದೇನೋ?!) ಹೋಗಲಾಡಿಸುವುದು. ಎರಡು, ವ್ಯಾಕರಣ ದೋಷದ ಬಗೆಗೆ ಇರುವ ಅತಿಯಾದ ಭಯ. ಮೂರು, ಮಕ್ಕಳಿಗೆ ಓದು ಮತ್ತು ಬರೆಯುವ ಕೌಶಲ್ಯವನ್ನು ಬೆಳೆಸುವುದು.
- ಮಕ್ಕಳು ಸದಾ ಏನಾದರೂ ಹೊಸದನ್ನು ಸೃಷ್ಟಿಸಲು ಉತ್ಸುಕರಾಗಿರುತ್ತಾರೆ. ಆದರೆ ಅವರು ಆತ್ಮವಿಶ್ವಾಸದಿಂದ ಮುನ್ನಡೆಯಲು ಅವರಿಗೆ ಪ್ರೋತ್ಸಾಹ ಮತ್ತು ಮೆಚ್ಚುಗೆಗಳ ಅಗತ್ಯವಿದೆ.

  ಭಾಷಾ ಬೆಳವಣಿಗೆಯ ಹಿನ್ನೆಲೆಯಲ್ಲಿ ಸೃಜನಶೀಲ ಅಭಿವ್ಯಕ್ತಿಯ ಅರ್ಥವನ್ನು ನೋಡಬೇಕು. ಸಾಮಾನ್ಯ ಅರ್ಥದಲ್ಲಿ, ಸೃಜನಶೀಲವಾದ ಅಭಿವ್ಯಕ್ತಿ ವಿಶಿಷ್ಟವಾದ ಸಂಗತಿಯೇನಲ್ಲ. ಇದು ಮಕ್ಕಳಿಗೆ ವಿಶಿಷ್ಟ ಏಕೆಂದರೆ, ಅದು ಈ ಹಿಂದೆ ಮಾಡದಿದ್ದುದನ್ನು ಈಗ ಮಾಡುತ್ತಿರುವುದರಿಂದ. ಮಕ್ಕಳಿಗೆ ಸೃಜನಾತ್ಮಕವಾಗಿ ಅಭಿವ್ಯಕ್ತಿಸುವುದು ಹೊಸ ಅನುಭವವಾಗಿರುತ್ತದೆ. ಈ ಅಭಿವ್ಯಕ್ತಿಗಳು ಇತರ ವಿಶಿಷ್ಟವಾದ ಅಭಿವ್ಯಕ್ತಿಗಳಿಗೆ ಅಡಿಪಾಯ ಹಾಕಿ ಅವಕಾಶ ನೀಡುತ್ತವೆ. ಇದರರ್ಥ, ಸೃಜನಶೀಲವಾದ ಅಭಿವ್ಯಕ್ತಿಗಳು ಅದೇನೋ ವಿಶಿಷ್ಟವಾದದ್ದು ಮತ್ತು ದೊಡ್ಡದಾದದ್ದು ಎನ್ನುವ ಆಲೋಚನೆಯಿಂದ ನಾವು ದೂರ ಸರಿಯಬೇಕಿದೆ.
- ಮುಕ್ತ ಮತ್ತು ಸೃಜನಾತ್ಮಕ ಅಭಿವ್ಯಕ್ತಿಗೆ ಪಾಠದ ಕೊನೆಯಲ್ಲಿ ಸೂಚಿಸಿರುವ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳುವುದರಿಂದ ಅವರಿಗೆ ಸಾಕಷ್ಟು

ಅವಕಾಶಗಳನ್ನು ನೀಡಿದಂತಾಗುತ್ತದೆ. ಈ ಕನಿಷ್ಠ ಅಗತ್ಯವನ್ನಾದರೂ ಶಿಕ್ಷಕರು ಪೂರೈಸಬೇಕು. ಮಕ್ಕಳು ಸೃಜನಶೀಲರಾಗಿದ್ದು ಪ್ರತಿ ಹಂತದಲ್ಲೂ ಅವರು ಬೆಳವಣಿಗೆ ಹೊಂದಲು ಸವಾಲುಗಳನ್ನು ಒಡ್ಡಬೇಕಾಗುತ್ತದೆ. ಅವರು ತೊಡಗಿಕೊಳ್ಳುವ ಚಟುವಟಿಕೆಗಳು ಅವರಿಗೆ ಸವಾಲಿನದಾಗಿರದಿದ್ದರೆ ಅವರ ಆಸಕ್ತಿಯ ಮಟ್ಟ ಕ್ಷೀಣಿಸುತ್ತದೆ.

- ಮಗುವಿಗೆ ಶಾಲೆಯಲ್ಲಿ ಮೌಖಿಕವಾದ ಹಂತದಲ್ಲಿ ಮನೆ ಭಾಷೆಯ ಅಭಿವ್ಯಕ್ತಿಗೆ ಯಾವುದೇ ಮುಜುಗರವಿಲ್ಲದೆ ಅವಕಾಶ ನೀಡುವುದಕ್ಕೆ ಮನ್ನಣೆ ನೀಡಬೇಕು. ಇದು ಮೌಲ್ಯಯುತವಾದದ್ದೆಂದು ಅವರು ಪರಿಗಣಿಸಿ ಅದರಿಂದ ಸುಲಲಿತವಾದ ಬರವಣಿಗೆಗೆ ಬೆಂಬಲ ನೀಡುವಂತಾಗಬೇಕು.
- ಕೊನೆಯದಾಗಿ ಈ ಅಧ್ಯಯನವು ನಿರೂಪಿಸಿ ತೋರಿಸುತ್ತಿರುವ ಮುಖ್ಯಾಂಶಗಳೆಂದರೆ: ಎಲ್ಲಾ ಮಕ್ಕಳು ಸೃಜನಶೀಲವಾಗಿ ಮತ್ತು ಸ್ವತಂತ್ರವಾಗಿ ಅಭಿವ್ಯಕ್ತಿಸುವಲ್ಲಿ ಸಮರ್ಥರಿರುತ್ತಾರೆ ಮತ್ತು ಅವರಿಗೆ ಶಾಲಾ ತರಗತಿಗಳಲ್ಲಿ ಇದಕ್ಕೆ ಕ್ರಿಯಾಶೀಲವಾದ ಬೆಂಬಲದ ಅವಶ್ಯಕತೆ ಇದೆ. ಈ ಅವಲೋಕನವು ಶಿಕ್ಷಕರಿಗೆ ಸೂಚ್ಯವಾಗಿ ತಿಳಿಸುತ್ತಿರುವ ಒಂದು ಕಲಿಕೆಯ ಅಂಶವೇನೆಂದರೆ, ಮಕ್ಕಳ ಅಭಿವ್ಯಕ್ತಿಯಲ್ಲಿ ವ್ಯಾಕರಣದ ಸಂರಚನೆಯನ್ನು ಸರಿಪಡಿಸುವುದಕ್ಕಿಂತ ಚಟುವಟಿಕೆಗಳ ಮೂಲಕ ಅರ್ಥಗ್ರಹಿಕೆಯ ಕಡೆಗೇ ಹೆಚ್ಚು ಒತ್ತನ್ನು ನೀಡಿ, ಮಕ್ಕಳ ಸೃಜನಶೀಲ ಮತ್ತು ಸ್ವತಂತ್ರ ಅಭಿವ್ಯಕ್ತಿಗೆ ಹೆಚ್ಚು ಅವಕಾಶಗಳನ್ನು ನೀಡಬೇಕು.

## ಪರಾಮರ್ಶನೆ


1. NCERT. 2005. National Curriculum Framework. New Delhi: NCERT
2. NCERT. 2017. Learning Outcomes at the elementary stage. New Delhi, NCERT



**ಜಿ. ವಿ. ನಾಗಾನಂದ** : ಶಿಕ್ಷಣ ಮತ್ತು ಕನ್ನಡ ಭಾಷೆಯಲ್ಲಿ ಸ್ನಾತಕೋತ್ತರ ಪದವಿಗಳನ್ನು ಹೊಂದಿರುವ ಇವರು ಅಜೀಂ ಪ್ರೇಮ್‌ಜಿ ಫೌಂಡೇಷನ್, ಮಂಡ್ಯ ಜಿಲ್ಲಾ ಸಂಸ್ಥೆಯಲ್ಲಿ 'ಆರಂಭಿಕ ಭಾಷಾ ಕಲಿಕೆ' ಕ್ಷೇತ್ರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶಿಕ್ಷಕರ ವೃತ್ತಿಪರ ಬೆಳವಣಿಗೆಯಲ್ಲಿ ನಿರತರಾಗಿದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕರಾಗಿ ವೃತ್ತಿ ಆರಂಭಿಸಿ ರಾಜ್ಯ ಸಂಪನ್ಮೂಲ ವ್ಯಕ್ತಿಯಾಗಿಯೂ ಗುರುತಿಸಿಕೊಂಡು ಎಂಟು ವರ್ಷಗಳ ಅನುಭವ ಹೊಂದಿದ್ದಾರೆ.

*ಸಂಪರ್ಕ :* nagananda.gv@azimpremjifoundation.org